**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

## ಕ್ರಿ ಮೊ ಸಂಖ್ಯೆ 331/2021

ಪಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

-ವಿರುದ್ಧ-

ಆರೋಪಿ/ತರುಃ ಅರುಣ್ ರೋಡ್ರಿಗಸ್ ಬಿನ್ ಸಿರಿಲ್ ರೋಡ್ರಿಗಸ್,

**ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ**

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಕೇಳಿದ್ದೇನೆ

ಪ್ರಶ್ನೆ-2 ಃ ಪ್ರಾಸಾ-1 ಕುಮಾರಸ್ವಾಮಿ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ತಾನು ತರೀಕೆರೆಯಿಂದ ಲಿಂಗದಹಳ್ಳಿ ಗ್ರಾಮಕ್ಕೆ ಸಂಜೆ 08.30 ಗಂಟೆ ಸಮಯದಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ ಕೆಂಚಾಪುರದ ಸ್ವಲ್ಪ ದೂರದಲ್ಲಿ ಶಿವು ಎಂಬುವವರು ಅವರ ಬೈಕಿನಲ್ಲಿ ಕೆಳಗೆ ಬಿದಿದ್ದರು, ತಾನು ಹೋಗಿ ಶಿವುರವರನ್ನು ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು, ವೈದ್ಯರು ಪರಿಶೀಲಿಸಿ ಶಿವುರವರು ಮೃತಪಟ್ಟಿರುತ್ತಾರೆಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-4 ಈಶ್ವರ್ ವಾಹನ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.02.2020 ರಂದು ಸಂಜೆ 04.00 ಗಂಟೆಗೆ ಲಿಂಗದಹಳ್ಳಿ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಅಲ್ಲಿದ್ದ ಅಪಘಾತಕ್ಕೆ ಒಳಗಾದ ವಾಹನವಾದ ಕೆಎಃ66/ಜೆ-5713 ವಾಹನವನ್ನು ಪರೀಕ್ಷೆ ಮಾಡಿದಾಗ ತಪಾಸಣೆಗೆ ಒಳಪಡಿಸಿದಾಗ ಕಂಡು ಬಂದ ನ್ಯೂನತೆಗಳೇನೆಂದರೆ ಅದರ front mudgurad sheared off and crushed, front head light smashed, front both side indicators smashed, front wind shield mask smashed, steering handle both side pressed inward, front both side shock absorbers bend, left side gear lever at front end bend, front crash guard at left side pressed inward ಮತ್ತು ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು, ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ನಿಪಿ-12 ರಂತೆ

ವರದಿಯನ್ನು ಸಲ್ಲಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಹಾಗೂ ಕೆಎ:52/7841 ವಾಹನವನ್ನು ಪರೀಕ್ಷಿಸಿದಾಗ ಕಂಡು ಬಂದ ನ್ಯೂನತೆಗಳೇನೆಂದರೆ ಅದರ right side foot rest of driver scratched ಮತ್ತು ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು, ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ವರದಿಯನ್ನು ನಿಪಿ-13 ರಂತೆ ಸಲ್ಲಿರುತ್ತೇನೆಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-5 ಃ ಪ್ರಾಸಾ-5 ಸುಂದರೇಶ, ಮುಖ್ಯಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12.02.2020 ರಂದು ಬೆಳಿಗ್ಗೆ 09.00 ಗಂಟೆಗೆ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 18/2020 ರಲ್ಲಿ ಐಪಿಸಿ ಕಲಂ 279, 304(ಎ) ಮತ್ತು ಐ ಎಂ ವಿ ಆಕ್ಟ್ ಕಲಂ 187 ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-6 ಃ ಪ್ರಾಸಾ-6 ಯೋಗೇಶ್.ಕೆ.ಎಂ. ಸಿಪಿಐ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12.02.2020 ರಂದು ಚಾಸಾ-13 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ಅದೇ ದಿನ ಚಾಸಾ-14 ರವರಿಗೆ ಶವಪಂಚನಾಮೆ ಜರುಗಿಸಲು ಆದೇಶ ನೀಡಿದ್ದು, ನಂತರ ಅದೇ ದಿನ ಚಾಸಾ-14 ರವರು ಶವಪಂಚನಾಮೆ ಜರುಗಿಸಿ, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ತನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-7 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಕೃತ್ಯ ನಡೆದ ಸ್ಥಳದಲ್ಲಿ ರಂಗಪ್ಪನವರ ಫಾರಂ ಹತ್ತಿರ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಮಹಜರು ಕ್ರಮವನ್ನು ಜರುಗಿಸಿ, ಲೆಪ್ಪದಿಂದ ಕೂಡಿದ 5 ನೀಲಿ ಬಣ್ಣದ ಗಾಜಿನ ಚೂರುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ನಂತರ ಪೋಟೋವನ್ನು ತೆಗೆಸಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇವೆ, ಅಮಾನತ್ತು ಪಡಿಸಿಕೊಂಡ ಮುದ್ದೆಮಾಲನ್ನು ಮಾಲುಪಟ್ಟಿ ಸಂಖ್ಯೆ 13/2020 ರಲ್ಲಿ ನಮೂದು ಮಾಡಿ ಸಿಬ್ಬಂದಿಯ

ಮುಖಾಂತರ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-8 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದೇ ದಿನ ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣಕ್ಕೆ ಹೋಗಿ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಕ್ರಮವನ್ನು ಜರುಗಿಸಿ, ಆ ಸಮಯದಲ್ಲಿ ಅಪಘಾತಕ್ಕೆ ಒಳಗಾದ ಟಿವಿಎಸ್ ರಾಂಡಮ್ ಬೈಕನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ಆ ಸಮಯದಲ್ಲಿ ಪೋಟೋ ತೆಗೆಸಿರುತ್ತೇನೆ, ಅದೇ ದಿನ ಸಾಕ್ಷಿದಾರರಾದ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 17.02.2020 ರಂದು ಮೃತ ಜುಂಜಾನಾಯ್ಕರವರ ಪಿ.ಎಂ. ವರದಿಯನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-9 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.02.2020 ರಂದು ಅಪಘಾತಕ್ಕೆ ಒಳಗಾದ ಟಿವಿಎಸ್ ಬೈಕನ್ನು ಐಎಂವಿ ತಪಾಸಣೆಗೆ ಒಳಪಡಿಸಿರುತ್ತೇನೆ, ದಿನಾಂಕ 28.02.2020 ರಂದು ಚಾಸಾ-11 ರವರಿಂದ ಐಎಂವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿನಾಂಕ 02.03.2020 ರಂದು ಅಪಘಾತಕ್ಕೆ ಒಳಗಾದ ಟಿವಿಎಸ್ ಬೈಕನ್ನು ಆರ್.ಸಿ. ಮಾಲೀಕರಾದ ಕುಮಾರ್ ರವರಿಗೆ ಇಂಡಿಮಿನಿಟಿ ಬಾಂಡ್ ಪಡೆದು ಬಿಟ್ಟುಕೊಟ್ಟಿರುತ್ತೇನೆ, ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-10 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23.03.2020 ರಂದು ಅಪಘಾತವುಂಟು ಮಾಡಿದ ಲಾರಿ ನಂ.ಕೆಎಃ52/7841 ನ್ನು ಪಂಚರಾದ ಚಾಸಾ-10 ಮತ್ತು 5 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಜರುಗಿಸಿ ಅಮಾನತ್ತು ಪಡಿಸಿಕೊಂಡು ಛಾಯಚಿತ್ರವನ್ನು ತೆಗೆಸಿರುತ್ತೇನೆ, ನಂತರ ಲಾರಿಯ ಮಾಲೀಕ ಅರುಣ್ ರೋಡಿಗ್ರಸ್ ಆರೋಪಿಯಾದ ನಿಮಗೆ ಐಎಂವಿ ಕಲಂ 133 ರಡಿ ನೋಟೀಸ್ ನೀಡಿರುತ್ತೇನೆ, ಅದೇ ದಿನ ಅವರಿಂದ ಉತ್ತರವನ್ನು ಸ್ವೀಕರಿಸಿಕೊಂಡಿರುತ್ತೇನೆ, ಆರೋಪಿಯಾದ ನಿಮಗೆ ದಸ್ತಗಿರಿ ಕ್ರಮ ಜರುಗಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಲಾರಿ ಮಾಲೀಕರಾದ ಆರೋಪಿ ನಿಮ್ಮಿಂದ ಲಾರಿಯ ದಾಖಲಾತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ, ಅದೇ ದಿನ ಲಾರಿಯ ತಪಾಸಣೆಗಾಗಿ ಚಾಸಾ-11 ರವರಿಗೆ ಮನವಿ ಪತ್ರ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-11 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.03.2020 ರಂದು ಪಿರ್ಯಾದಿ ಚಾಸಾ-1 ಮತ್ತು ಚಾಸಾ-4, 5 ರವರ

ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 27.04.2020 ರಂದು ಆರ್.ಸಿ. ಮಾಲೀಕ ಆರೋಪಿರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ಲಾರಿಯನ್ನು ಅವರ ವಶಕ್ಕೆ ನೀಡಿರುತ್ತೇನೆ, ದಿನಾಂಕ 24.05.2020 ರಂದು ಚಾಸಾ-11 ರವರಿಂದ ಲಾರಿಯ ಸಂಬಂಧ ಐಎಂವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿ ಕೊಂಡಿರುತ್ತೇನೆ, ಅದೇ ದಿನ ಸಿಬ್ಬಂದಿಯಾದ ಕಿರಣ್‌ಕುಮಾರ್ ರವರಿಂದ ಛಾಯಚಿತ್ರವನ್ನು ಸಿಡಿಗೆ ವರ್ಗಾಯಿಸಿರುವ ಬಗ್ಗೆ 65(ಬಿ) ಸರ್ಟಿಫಿಕೇಟ್ ಪಡೆದು ಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-12 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿಮ್ಮ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-13 ಃ ಪ್ರಾಸಾ-8 ತಿಮ್ಮಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ 09.15 ಗಂಟೆ ಸಮಯದಲ್ಲಿ ತಾನು ಲಿಂಗದಹಳ್ಳಿಯಿಂದ ಕೆಂಚಾಪುರ ಗ್ರಾಮಕ್ಕೆ ಲಾರಿಯಲ್ಲಿ ಬರುತ್ತಿರುವಾಗ ಎದುರುಗಡೆ ಒಂದು ಬೈಕ್ ಗೆ ಲಾರಿ ಅಪಘಾತಪಡಿಸಿರುತ್ತದೆ, ಬೈಕಿನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-14 ಃ ಪ್ರಾಸಾ-9 ನಾಗರಾಜ್ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಕೆಂಚಾಪುರದ ಗೇಟ್ ಹತ್ತಿರ ಅಪಘಾತದ ವಿಚಾರವಾಗಿ ಪೊಲೀಸರು ಮಾಡಿದ ಮಹಜರಿಗೆ ತಾನು ಸಹಿ ಮಾಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುತ್ತದೆ, ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಇನ್ನೊಂದು ವಾಹನ ಅಮಾನತ್ತು ಮಹಜರಿಗೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಟಿ ವಿ ಎಸ್ ಬೈಕ್ ನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-15 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-16 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ

(ಊರ್ಮಿಳ.ವಿ)
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.